# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 904 |
| ಸದಸ್ಯರ ಹೆಸರು | ಶ್ರೀ ಗೋವಿಂದ ರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 14-03-2025 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ "ಯೂರಿಯಾ ಮಾಫಿಯಾ" ಎಗ್ಗಿಲ್ಲದೆ ಸಾಗಿದ್ದು, ರೈತರ ಪಾಲಿನ ಸಬ್ಸಿಡಿ ದರದ ಯೂರಿಯಾ ಗೊಬ್ಬರವು ಅನ್ಯ ರಾಜ್ಯದ ಕೈಗಾರಿಕೆಗಳ ಪಾಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ ಸಹಾಯಧನದ ಯೂರಿಯಾ ರಸಗೊಬ್ಬರವನ್ನು ಕೈಗಾರಿಕೆಗಳಿಗೆ ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ರಾಜ್ಯದಲ್ಲಿ ಸಬ್ಸಿಡಿ ಯೂರಿಯಾವನ್ನು ಅಕ್ರಮವಾಗಿ ಕೈಗಾರಿಕೆಗಳಿಗೆ ಮಾರುತ್ತಿರುವ ಎಷ್ಟು ಪ್ರಕರಣಗಳು ದಾಖಲಾಗಿದೆ; | ಪ್ರಸಕ್ತ ಸಾಲಿನಲ್ಲಿ, ರಾಜ್ಯದಲ್ಲಿ ಸಹಾಯಧನದ ಯೂರಿಯಾ ರಸಗೊಬ್ಬರವನ್ನು ಅಕ್ರಮವಾಗಿ ಸಾಗಿಸುತ್ತಿದ್ದ 04 ಪ್ರಕರಣಗಳು (ತುಮಕೂರು, ಚಿಕ್ಕಬಳ್ಳಾಪುರ, ಧಾರವಾಡ ಮತ್ತು ಚಿತ್ರದುರ್ಗ ಜಿಲ್ಲೆ) ದಾಖಲಾಗಿದ್ದು, ಸದರಿ ಪ್ರಕರಣಗಳ ಸಂಬಂಧ ತಪ್ಪಿತಸ್ಥರ ವಿರುದ್ಧ ಸಂಬಂಧಪಟ್ಟ ಪೋಲೀಸ್ ಠಾಣೆಗಳಲ್ಲಿ ಎಫ್.ಐ.ಆರ್ ದಾಖಲಿಸಲಾಗಿದೆ. |
| ಇ) | ಸಬ್ಸಿಡಿಯಲ್ಲಿ ನೀಡಲಾಗುವ ಯೂರಿಯಾವನ್ನು ಕೃಷಿಯ ಹೊರತಾಗಿ ಕೈಗಾರಿಕಾ ಉದ್ದೇಶಕ್ಕೆ ಬಳಸಲು ಅನುಮತಿ ಇದೆಯೇ; | ಸಹಾಯಧನದ ಯೂರಿಯಾ ರಸಗೊಬ್ಬರವನ್ನು ಕೃಷಿಗೆ ಹೊರತಾಗಿ ಕೈಗಾರಿಕಾ ಉದ್ದೇಶಕ್ಕೆ ಬಳಸಲು ಅನುಮತಿ ಇರುವುದಿಲ್ಲ. |
| ಈ) | ರೈತರಿಗೆ ನೀಡಲಾಗುತ್ತಿರುವ ಯೂರಿಯಾದ 45 ಕೆ.ಜಿ. ಚೀಲಕ್ಕೆ ಮಾರುಕಟ್ಟೆಯ ಬೆಲೆ ಎಷ್ಟು; ಇದನ್ನು ರೈತರಿಗೆ ಸಬ್ಸಿಡಿ ರೂಪದಲ್ಲಿ ಎಷ್ಟು ರೂಪಾಯಿಗಳಿಗೆ ನೀಡಲಾಗುತ್ತಿದೆ; ಇದರಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಪಾಲೆಷ್ಟು? | ರೈತರಿಗೆ ನೀಡಲಾಗುತ್ತಿರುವ ಸಹಾಯಧನದ ಯೂರಿಯಾ ರಸಗೊಬ್ಬರದ 45 ಕೆ.ಜಿ. ಚೀಲದ ಗರಿಷ್ಠ ಮಾರಾಟ ಬೆಲೆಯು(MRP) ರೂ.266.50/- ಆಗಿರುತ್ತದೆ. ದೇಶದಲ್ಲಿ, ಯೂರಿಯಾ ಮಾತ್ರ ನಿಯಂತ್ರಿತ ರಸಗೊಬ್ಬರವಾಗಿದ್ದು, ಇದನ್ನು ಶಾಸನಬದ್ಧ ಅಧಿಸೂಚಿತ ಏಕರೂಪದ ಮಾರಾಟ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಪ್ರಸ್ತುತ ಯೂರಿಯಾದ ಗರಿಷ್ಠ ಮಾರಾಟ ಬೆಲೆಯನ್ನು ಕೇಂದ್ರ ಸರ್ಕಾರವು ನಿಯಂತ್ರಿಸುತ್ತದೆ. ಯೂರಿಯಾ ರಸಗೊಬ್ಬರದ ಸಹಾಯಧನವು ಯೂರಿಯಾ ಉತ್ಪಾದನಾ ಘಟಕಗಳ |

| | | |
|---|---|---|
| | | ಉತ್ಪಾದನೆಯ ತಂತ್ರಜ್ಞಾನ, ಇಂಧನದ ದಕ್ಷತೆ ಮತ್ತು ಉತ್ಪಾದನಾ ವೆಚ್ಚದ ಮೇಲೆ ಅವಲಂಬಿತವಾಗಿರುತ್ತದೆ. ಕೇಂದ್ರ ಸರ್ಕಾರದಿಂದ ಪ್ರತಿ ಯೂರಿಯಾ ರಸಗೊಬ್ಬರದ ಚೀಲಕ್ಕೆ ರೂ.1168 ರಿಂದ ರೂ.2112.52 ರಷ್ಟು ಸಹಾಯಧನವನ್ನು ನೀಡಲಾಗುತ್ತಿದ್ದು, ಇದರಲ್ಲಿ ರಾಜ್ಯ ಸರ್ಕಾರದ ಪಾಲಿರುವುದಿಲ್ಲ. |

ಸಂಖ್ಯೆ: AGRI/76/ACT/2025

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು